ಹೇಳಲು ನಾನಾರು... ನಾನು ಕೂಡ ಕಥೆಯ ಒಂದು ಸಾಲಷ್ಟೇ... ಒಂದೊಂದು ಹೊಕ್ಕುಳೂ ಒಂದೊಂದುಕೊಂಡಿಯಷ್ಟೇ... ತನಗಿಲ್ಲಿ ತಾವಿಲ್ಲ ಎಂದು ಆ ಆದಿ ಕಥೆ ಮೌನವಾಯಿತು. ಹಾಗಾದರೆ ಇವತ್ತಿನವರೆಗೆ ಯಾವ ಕಥೆ ಬೇಕು... ಕಣ್ಣಾರೆ ಎಲ್ಲ ಅತ್ಯಾಚಾರಗಳ ಕಲಾತ್ಮಕವಾಗಿ ಸೆರೆ ಹಿಡಿದು, ಅದ್ಭುತ ವರದಿ ಮಾಡಿ ಮಾನ್ಯರು ಚರ್ಚಿಸಿ ಕಾಯ್ದೆಯ ತಜ್ಞರು ವಿವರಿಸುತ್ತಲೇ ಅಪರಾಧ ಮತ್ತು ಶಿಕ್ಷೆಯ ನಾಟಕವಾಡುತ್ತಿರುವಲ್ಲಿ, ಅಲ್ಲಿ ವಿದ್ಯುನ್ಮಾನ ಮಾಧ್ಯಮಗಳ ನಕಲಿ ವಿದೂಷಕರು ಚರ್ಚಾ ಕೂಟ ಏರ್ಪಡಿಸಿ ಮೆರೆಯುವಲ್ಲಿ ಕಥೆಗಾರನೊಬ್ಬ ಕಥೆ ಬರೆಯಬೇಕೇ... ಹಾಗಾದರೆ ಆತ ಹೇಗೆ ಬರೆಯಬೇಕು...

ಕಥೆಯಿಂದಲೇ ಧರ್ಮ ಹುಟ್ಟಿದ್ದು; ಕಥೆಯಿಂದಲೇ ಧರ್ಮ ಬದಲಾದದ್ದು. ಜಗತ್ತಿನ ಸಣ್ಣಕಥೆಗಳು ಮಾನವ ಸಂಬಂಧಗಳನ್ನು ವಿಸ್ತರಿಸಿವೆ. ಪಂಚತಂತ್ರ ಕಥೆಗಳು ಆ ಬಗೆಯವು. 'ನಮ್ಮ ಪೂರ್ವಿಕರೆಲ್ಲ ಕಥೆಗಾರರಾಗಿದ್ದರು. ಆ ಮೂಲಕ ಹಿಂಸೆ ಸಹಿಸಿದ್ದರು. ಅನ್ಯಾಯದ ವಿರುದ್ಧ ರಮ್ಯಾದ್ಭುತ ಮಾಂತ್ರಿಕ ದಂಗೆಯ ಅವೈದಿಕ ಕಥೆಗಳ ಕಟ್ಟಿದ್ದರು. ಆ ವಿಶಾಲ ನೀಲ ಸಾಗರದ ಬಗೆಗೂ, ಆಕಾಶದ ತಾರಾಮಂಡಲದ ಬಗೆಗೂ ಈಗಿನವರಿಗೆ ಅರಿವಿಲ್ಲ, ಕನಸಿಲ್ಲ, ಧ್ಯಾನವಿಲ್ಲ, ಕಡೇ ಪಕ್ಷ ತಾನು ಯಾರತಲೆ ಮೇಲೆ ನಿಂತಿರುವೆ ಎಂಬ ಅಸ್ತಿತ್ವದ ಋಣದ ಎಚ್ಚರವಿಲ್ಲ...'

ಆ ಆದಿಕಾಲದ ಕಥಾ ಮನುಷ್ಯ ಇವತ್ತಿನ ವರೆಗೆ ತಿಳಿ ಹೇಳುವಷ್ಟು ದೊಡ್ಡವನಲ್ಲ. ಮುಗ್ಧತೆ ಕಥೆಯ ತಾಯಿ ಮೊಳಕೆ. ಬೀಜ ಒಂದು ತಂತಾನೆ ಗಾಳಿ ಬೆಳಕು ನೀರಿನ ಮೂಲಕ ಸುತ್ತಲ ಹಿಂಸೆಯ ನರಕವನ್ನು ಮೀರಿ ಚಿಗುರುವುದು. ಅದು ಬೇರು ಬಿಟ್ಟು ನೆರಳಾಗುವುದು ಅಮಾಯಕ, ಅನಾಥರಿಗೆ ದಾರಿ ತೋರಲು. ಕಥೆ ಎಂಬ ತಾಯ ಬಳ್ಳಿ ಎಷ್ಟು ಪ್ರಬಲ ಎಂದರೆ ಯಾರೂ ಅಳಿಸಲಾರರು. ಆಕಾಶಕ್ಕೆ ನಕ್ಷತ್ರಗಳು ಇರಲೇಬೇಕು. ಭೂಮಿಗೆ, ಮಾನವರಿಗೆ ಕಥೆಗಳಿರಲೇಬೇಕು. ಪ್ರತಿಯೊಂದು ಕಾಲಮಾನದಲ್ಲೂ ಯಾರಾದರೂ ಒಬ್ಬ ತಾಯಿಯ ಮೊಲೆ ತೊಟ್ಟಿನಲ್ಲೂ ಕಥೆ ಒಂದು ಮಡುಗಟ್ಟಿರುತ್ತದೆ. ಅದನ್ನು ಕುಡಿದವರು ತಮ್ಮ ಕಾಲಕ್ಕೆ ಬೇಕಾದ ಕಥೆಯನ್ನು ಬರೆದೇ ಬರೆಯುವರು. ಇಂತಲ್ಲಿ ನಾನು ಆಕಾಶದ ಹೊಕ್ಕುಳ ಕೇಳಲಾರೆ; ಭೂತಾಯ ಹೊಕ್ಕುಳನೂ ಬೇಡಲಾರೆ. ಅಖಂಡ ಕಥನದ ಹೊಕ್ಕುಳ ಬಂಧುತ್ವ ಒಂದು ಕನಸು. ಯಾವುದೇ ವಿದ್ಯುನ್ಮಾನ ಯುಗದಲ್ಲೂ ಜನನ ಮೂಲ, ಜನನ ಮೂಲವೇ ಆಗಿರುತ್ತದೆ. ಕಥೆಯ ಹುಟ್ಟು ಹಾಗೂ ವಿಕಾಸವೂ ಹಾಗೆಯೇ... ಗರ್ಭ ಒಂದು ಅಳಿದಾಗ ಆಗ ಅಲ್ಲಿಗೆ ಒಂದು ಕಥೆ ಮುಗಿಯುತ್ತದೆ. ಗರ್ಭ ಒಂದು ಅರಳಿದಾಗ ಅಲ್ಲೊಂದು ಕಥೆ ಹುಟ್ಟಿರುತ್ತದೆ.

ಅನಾದಿ ಕಥೆ ಎದುರು ಬಂದು 'ನನ್ನ ಕಥೆ ಮುಗಿಯಿತು' ಎಂದಿತು. 'ತಡೆ, ತಡೇ; ತಾಯ ಎದೆಹಾಲ ಹೊಳೆಗಳಿಗೆ ಕೊನೆಯೇ ಇಲ್ಲ. ಆ ತಾಯಂದಿರ ಹಾಲು ಕುಡಿದವರು ಯಾವತ್ತೂ ಅಖಂಡ ಮಾನವತ್ವದ ಬಗ್ಗೆ ಕಥೆಯ ಜೋಗುಳವ ಹಾಡುತ್ತಲೇ ಇರಬೇಕಿರುತ್ತದೆ' ಎಂದು ತಡೆದೆ.

ಅಂತಃಕರಣದ ತೆಪ್ಪದಲಿ ತೇಲಿ ಬಂದವರು ಜಗದ ಎಲ್ಲ ಮಾನವ ಪಾಡನ್ನು ಹುಡುಕಿ ದಿಗಂತದ ಮೇಲೆ ಸೂರ್ಯ ಏನು ಬರೆದಿದ್ದಾನೆಂದು ದಿಟ್ಟಿಸುತ್ತ ತಮ್ಮ ಕಥೆಗಳ ನಿರೂಪಿಸಲು ಮುಂದಾಗಿದ್ದರು. ಕಾಲ ಪಕ್ವವಾಗಿತ್ತು.

*ಲೇಖಕರು ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿಯವರು. ಕತೆ. ಕವಿತೆ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು.*